# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. | : | 1273 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕಿಸ್ ಬಾನು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.12.2024 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಜೀವನ್ ಭೀಮಾ ನಗರದ ಮುಖ್ಯ ರಸ್ತೆಯ ತಿರುವಿನಲ್ಲಿ ವಾಹನ ದಟ್ಟಣೆಯಿಂದಾಗಿ ರಸ್ತೆ ದಾಟಲು ಪಾದಚಾರಿಗಳಿಗೆ ತುಂಬಾ ಕಷ್ಟಕರ-ವಾಗುತ್ತಿರುವುದಲ್ಲದೆ ಈ ಸ್ಥಳದಲ್ಲಿ ಅನೇಕ ಅಪಘಾತಗಳು ನಡೆಯುತ್ತಿದ್ದು ಇತ್ತೀಚೆಗೆ ಅಪಘಾತವೊಂದರಲ್ಲಿ ಮಗುವೊಂದು ಮರಣ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ |
| ಆ) | ಹೌದಾದಲ್ಲಿ, ಸದರಿ ತಿರುವಿನಲ್ಲಿ ಸಿಗ್ನಲ್ ದೀಪಗಳನ್ನು ಅಳವಡಿಸಿ ವಾಹನ ದಟ್ಟಣೆ ನಿರ್ವಹಿಸಲು ಸಂಚಾರಿ ಪೊಲೀಸ್ ಒಬ್ಬರನ್ನು ನಿಯೋಜಿಸಲು ಸರ್ಕಾಕ್ಕಿರುವ ತೊಂದರೆಗಳೇನು; | ➢ ಜೀವನ್ ಭೀಮಾ ನಗರದ ಮುಖ್ಯ ರಸ್ತೆಯಲ್ಲಿರುವ ತಿರುವಿನ ಬಳಿ, 2024ನೇ ಸಾಲಿನಲ್ಲಿ, ವರದಿಯಾಗಿರುವ ಒಂದು ಪ್ರಕರಣವನ್ನು ಹೊರತುಪಡಿಸಿ, ಯಾವುದೇ ರಸ್ತೆ ಅಪಘಾತಗಳು ಸಂಭವಿಸಿರುವುದಿಲ್ಲ.<br>➢ ಆದಾಗ್ಯೂ ಸಹ, ಪಾದಚಾರಿಗಳು ನಡೆದು ರಸ್ತೆ ದಾಟಲು ಅನುಕೂಲವಾಗುವ ನಿಟ್ಟಿನಲ್ಲಿ ಹಾಗೂ ಸದರಿ ತಿರುವಿನಲ್ಲಿ ಸಂಭವಿಸಬಹುದಾದ ಅಪಘಾತಗಳನ್ನು ತಡೆಗಟ್ಟುವ ದೃಷ್ಠಿಯಿಂದ ದಿನಾಂಕ:28.06.2024 ರಂದು ಮುಖ್ಯ ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿ.ಬಿ.ಎಂ.ಪಿ ಎನ್.ಆರ್. ಸ್ಕ್ವೇರ್, ಬೆಂಗಳೂರು ನಗರ ಇವರಿಗೆ ವೇಗ ನಿಯಂತ್ರಕ /ರಸ್ತೆಯ ಉಬ್ಬು/ಹೆಚ್.ಆರ್.ಪಿ.ಸಿ. ಅಥವಾ ರಂಬ್ಲರ್ ಸ್ಟ್ರಿಪ್‌ಅನ್ನು ಅಳವಡಿಸಲು ಕೋರಿ ಪತ್ರ ಬರೆಯಲಾಗಿರುತ್ತದೆ (**ಅನುಬಂಧ-1** ರಲ್ಲಿ ಒದಗಿಸಿದೆ).<br>➢ ಪ್ರಸ್ತುತ ಸದರಿ ತಿರುವಿನ ಬಳಿ ಸಂಚಾರ ವಿಭಾಗಕ್ಕೆ ಸಂಬಂಧಿಸಿದ ಸೆಕ್ಟರ್ ಕೋಬ್ರಾ ವಾಹನ ಸಿಬ್ಬಂದಿಯು ತನ್ನ ಗಸ್ತಿನ ವೇಳೆ ಸಂಚಾರ ದಟ್ಟಣೆ ಉಂಟಾದ ಸಮಯದಲ್ಲಿ ಭೌತಿಕವಾಗಿ ಇದ್ದುಕೊಂಡು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.<br>➢ ಈ ತಿರುವಿನ ಬಳಿ ಪ್ರತ್ಯೇಕ ಸಂಚಾರ ಸಿಬ್ಬಂದಿಯನ್ನು ಸುಗಮ ಸಂಚಾರ ನಿರ್ವಹಣೆಯ ಕರ್ತವ್ಯಕ್ಕೆ ನಿಯೋಜಿಸಲು ಕ್ರಮ ಕೈಗೊಂಡಿದೆ.<br>➢ ಜೀವನ್ ಭೀಮಾ ನಗರದ ಮುಖ್ಯ ರಸ್ತೆ ತಿರುವಿನಲ್ಲಿ ಸಿಗ್ನಲ್ ದೀಪವನ್ನು ಅಳವಡಿಸುವ ಅವಶ್ಯಕತೆಯ ಕುರಿತು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. |
| ಇ) | ಯಾವ ಕಾಲಮಿತಿಯೊಳಗೆ ಸದರಿ ತಿರುವಿನಲ್ಲಿ ಸಿಗ್ನಲ್ ದೀಪವನ್ನು ನಿರ್ವಹಿಸಲು ಸಂಚಾರಿ ಪೊಲೀಸರನ್ನು ನಿಯೋಜಿಸಲಾಗುವುದು? (ವಿವರ ನೀಡುವುದು) | |

ಹೆಚ್‌ಡಿ 645 ಎಸ್‌ಎಸ್‌ಟಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು.

ಸಂ:201/ಟಿಸಿ/ಜೆ.ಬಿ.ನಗರ.ಸಂ.ಪೊ.ಠಾಣೆ/2024.

jnagartrafficbcp@ksp.gov.in,Ph-080-22942919.

ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಪೊಲೀಸ್ ಇನ್ಸ್‌ಪೆಕ್ಟರ್ ರವರ ಕಛೇರಿ, ಅನುಬಂಧ-1
ಜೆ.ಬಿ.ನಗರ ಸಂಚಾರ ಪೊಲೀಸ್ ಠಾಣೆ
ಜೆ.ಬಿ.ನಗರ ಮುಖ್ಯರಸ್ತೆ, ಬೆಂಗಳೂರುನಗರ.
ದಿನಾಂಕ:27-06-2024.

ರವರಿಗೆ,
ಮುಖ್ಯ ಕಾರ್ಯಪಾಲಕ ಅಭಿಯಂತರರು
ಟ್ರಾಫಿಕ್ ಇಂಜನಿಯರಿಂಗ್ ಸೆಲ್
ಬಿ.ಬಿ.ಎಂ.ಪಿ., ಎನ್.ಆರ್.ಸ್ಕ್ವೇರ್
ಬೆಂಗಳೂರು ನಗರ

ಮಾನ್ಯರೆ,

ವಿಷಯ: ಜೀವನ್ ಭೀಮಾನಗರ ಮುಖ್ಯ ರಸ್ತೆ ಜೀವನ್ ಭೀಮಾನಗರ ಬಸ್ ನಿಲ್ದಾಣ ರಸ್ತೆ ಜಂಕ್ಷನ್‌ನಲ್ಲಿ ವೇಗ ನಿಯಂತ್ರಕಗಳನ್ನು (ರಸ್ತೆ ಉಬ್ಬರ) ನಿರ್ಮಿಸುವ ಬಗ್ಗೆ

ಉಲ್ಲೇಖ: ಸ್ಥಳೀಯ ನಿವಾಸಿಗಳ ಮನವಿ ಪತ್ರ ದಿನಾಂಕ:01-06-2024.

******=******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಜೀವನ್ ಭೀಮಾನಗರ ಸರ್ಕಾರಿ ವಸತಿ ಗೃಹ ನಿವಾಸಿಗಳು ದಿನಾಂಕ:01-06-2024 ರಂದು ಠಾಣೆಗೆ ನೀಡಿರುವ ಮನವಿ ಪತ್ರದಲ್ಲಿ ಜೀವನ್ ಭೀಮಾ ನಗರದ ಮುಖ್ಯರಸ್ತೆಯ ತಿರುವಿನಲ್ಲಿ (ಬಸ್ ನಿಲ್ದಾಣಕ್ಕೆ ಹೋಗುವ ತಿರುವಿನಲ್ಲಿ) ರಸ್ತೆ ದಾಟಲು ತುಂಬಾ ಕಷ್ಟಕರವಾಗುತ್ತಿದೆ. ಜೀವನ್ ಭೀಮಾನಗರದಲ್ಲಿ ಸರ್ಕಾರಿ ವಸತಿಗೃಹಗಳಿದ್ದು, ಅತಿ ಹೆಚ್ಚು ಸಕಾರಿ ನೌಕರರು ವಾಸಿಸುತ್ತಿದ್ದಾರೆ. ಅಲ್ಲದೇ ಬೆಳಿಗ್ಗೆ ಕೆಲಸಕ್ಕೆ ಹೋಗುವ ಸಮಯದಲ್ಲಿ ಹಾಗೂ ಸಂಜೆ ಮರಳುವಾಗ ಅತಿ ಹೆಚ್ಚು ವಾಹನ ಸಂಚಾರವಿರುತ್ತದೆ. ಈ ತಿರುವಿನಲ್ಲಿ ಹಂಪ್ಸ್ ಅಳವಡಿಸುವಂತೆ ಒಂದೊಮ್ಮೆ ಮನವಿಯನ್ನು ಸಹ ನೀಡಲಾಗಿತ್ತು. ಈ ಸ್ಥಳದಲ್ಲಿ ಇತ್ತೀಚೆಗೆ ಅನೇಕ ಅಪಘಾತಗಳು ಆಗುತ್ತಿವೆ. ತಿಂಗಳ ಹಿಂದೆ ಮಗುವೊಂದು ಅಪಘಾತದಲ್ಲಿ ಮರಣ ಹೊಂದಿದ್ದು ಇಲಾಖೆಗೆ ತಿಳಿದ ವಿಷಯವೆ. ಅಲ್ಲದೆ ಇತ್ತೀಚೆಗೆ ಕಂದಾಯ ಇಲಾಖೆ ಮತ್ತು ನ್ಯಾಯಾಲಯದಲ್ಲಿ ಕೆಲಸ ಮಾಡುವ ಅಧಿಕಾರಿಯವರಿಗೆ ಆಕ್ಸಿಡೆಂಟ್ ಆಗಿದ್ದು ಪ್ರಜ್ಞೆ ತಪ್ಪಿ ಬಿದ್ದು ಪೆಟ್ಟಾಗಿರುತ್ತದೆ. ಶಾಲೆಗೆ ಹೋಗುವ ಮಕ್ಕಳು, ವಯಸ್ಸಾದವರು ಸೇರಿದಂತೆ ಎಲ್ಲರಿಗೂ ರಸ್ತೆ ದಾಟಲು ತುಂಬಾ ಕಷ್ಟವಾಗುತ್ತಿದೆ. ಅಲ್ಲದೆ ರಸ್ತೆ ಇಕ್ಕೆಲಗಳಲ್ಲಿ ಪಾದಚಾರಿ ರಸ್ತೆಯು ರಿಪೇರಿಯಾಗದೆ ಅಪೂರ್ಣವಾಗಿ ಅಲ್ಲಿಯೂ ಕೂಡ ನಡೆಯಲು ತುಂಬಾ ಕಷ್ಟವಾಗುತ್ತಿದೆ. ಆದ್ದರಿಂದ ಈ ಕೂಡಲೇ ಈ ತಿರುವಿನಲ್ಲಿ ಹಂಪ್ಸ್ ಹಾಕಲು ಸಂಬಂಧಪಟ್ಟವರಿಗೆ ಸೂಚಿಸುವಂತೆ ಕೋರಿರುತ್ತಾರೆ.

ಅರ್ಜಿದಾರರು ತಿಳಿಸಿರುವ ಸ್ಥಳವನ್ನು ಖುದ್ದಾಗಿ ಪರಿಶೀಲಿಸಿ, ಐ.ಆರ್.ಸಿ. ನಿಯಮಗಳನ್ನು ಪಾಲಿಸಿಕೊಂಡು ಜೆ.ಬಿ.ನಗರ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ನ್ಯೂ ತಿಪ್ಪಸಂದ್ರ ವಾರ್ಡ್ ನಂ.58ರ ಜೀವನ್ ಭೀಮಾನಗರ ಮುಖ್ಯ ರಸ್ತೆ, ಬಸ್ ನಿಲ್ದಾಣ ರಸ್ತೆ ಜಂಕ್ಷನ್‌ನಲ್ಲಿ ರಸ್ತೆ ಉಬ್ಬರ/ಹೆಚ್.ಆರ್.ಪಿ.ಸಿ/ರಂಬ್ಲರ್ಸ್ ನಿರ್ಮಿಸುವ ಬಗ್ಗೆ ಅಗತ್ಯ ಕ್ರಮಕೈಗೊಳ್ಳಲು ಕೋರಿದೆ. ಇದರೊಂದಿಗೆ ಜೀವನ್ ಭೀಮಾನಗರ ಸರ್ಕಾರಿ ವಸತಿ ಗೃಹ ನಿವಾಸಿಗಳು ನೀಡಿರುವ ಮನವಿ ಪತ್ರವನ್ನು ಲಗತ್ತಿಸಿದೆ.

| ಕ್ರ.ಸಂ. | ರಸ್ತೆ ಉಬ್ಬರ/ಹೆಚ್.ಆರ್.ಪಿ.ಸಿ/ರಂಬ್ಲರ್ಸ್ ನಿರ್ಮಿಸಬೇಕಾಗಿರುವ ಸ್ಥಳ | ಲ್ಯಾಟಿಟ್ಯೂಡ್ | ಲ್ಯಾಂಗಿಟ್ಯೂಡ್ |
|---|---|---|---|
| 01 | ಜೀವನ್ ಭೀಮಾನಗರ ಮುಖ್ಯ ರಸ್ತೆ, ಬಸ್ ನಿಲ್ದಾಣ ರಸ್ತೆ ಜಂಕ್ಷನ್, ಬೆಂಗಳೂರು. | 12.967255 | 77.657849 |

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ.

POLICE INSPECTOR
Jeevan Bimanagar Traffic Police Station
J.B. Nagar Main Road,
BANGALORE - 560 075

Scanned with OKEN Scanne